ಏನು ನಿರ್ಣಯ ಕೊಟ್ಟಿದೆ, ಅದರ ಬಗ್ಗೆ ಮುಂದೆ ನಮ್ಮ ನಿಲುವೇನು ಎನ್ನುವುದರ ಕುರಿತು ಎಲ್ಲರೂ ಕೂಡಿಕೊಂಡು ನಿರ್ಣಯಕ್ಕೆ ಬರುವುದಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ. ಹೀಗಾಗಿ ಎಲ್ಲರೂ ಕೂಡಿಕೊಂಡು, ವಿಚಾರ ಮಾಡಿಕೊಂಡು ಸರಿಯಾದ ರೀತಿಯಲ್ಲಿ ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ ಎನ್ನುವಂಥ ಮಾತನ್ನು ನಾನು ಹೇಳುತ್ತಿದ್ದೇನೆ.

**5. ನಿಯಮ 60ರಡಿಯಲ್ಲಿ ಚರ್ಚೆಗೆ ಅನುಮತಿ ಕೋರಿಕೆ:**
**ವಿಷಯ: ಕುಡಿಯುವ ನೀರಿನ ಸಮಸ್ಯೆ ಬಗ್ಗೆ.**

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):-** ಮಾನ್ಯ ಅಧ್ಯಕ್ಷರೆ, ನಾನು ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಬೇಕೆಂದು ಒಂದು ನೋಟೀಸನ್ನು ಕೊಟ್ಟಿದ್ದೇನೆ. ಕುಡಿಯುವ ನೀರಿನ ಬಗ್ಗೆ ಚರ್ಚೆ ಆಗಬೇಕೆಂದು ನಿಯಮ 60 ರಡಿಯಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಬೇರೆ ಕಲಾಪಗಳನ್ನೆಲ್ಲಾ ಬದಿಗೊತ್ತಿ, ಇದು ಬಹಳ ಪ್ರಾಮುಖ್ಯವಾದುದು ಮತ್ತು ಮಹತ್ವವಾದ ಒಂದು ವಿಷಯ. ಇವತ್ತು ಹಳ್ಳಿಗಾಡಿನಲ್ಲಿ ಅನೇಕ ಹಳ್ಳಿಗಳಲ್ಲಿ, ಕೆಲವು ಪಟ್ಟಣಗಳಲ್ಲೂ ಕೂಡ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ. ಇದರ ಬಗ್ಗೆ ಬೆಳಗಾವಿ ಅಧಿವೇಶನದಲ್ಲೂ ಚರ್ಚೆ ಮಾಡಿದ್ದೇವೆ. ಬೆಳಗಾವಿ ಅಧಿವೇಶನದಲ್ಲಿ ಕನಿಷ್ಠ 1 ಕೋಟಿ ರೂಪಾಯಿಗಳನ್ನು ಒಂದು ತಾಲ್ಲೂಕಿಗೆ ಬಿಡುಗಡೆ ಮಾಡಬೇಕೆಂದು ಹೇಳಿದ್ದೆವು. ಆದರೆ, ಇವರು 1 ಕೋಟಿ ರೂಪಾಯಿಯನ್ನು ಅಂದಿನಿಂದ ಇಂದಿನವರೆಗೆ ಬಿಡುಗಡೆ ಮಾಡಲೇ ಇಲ್ಲ. ಮೊನ್ನೆ ರೂ. 30 ಲಕ್ಷ ಬಿಡುಗಡೆ ಮಾಡಿದ್ದಾರೆನ್ನುವ ಮಾಹಿತಿ ನನಗೆ ನಿನ್ನೆ ದೊರೆತಿದೆ. ಅದು ಸಹ ಇನ್ನೂ ಹೋಗಿ ತಲುಪಿಲ್ಲ. ಈಗ ಏನಾಗಿದೆ ಎಂದರೆ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ಬೋರ್‌ವೆಲ್‌ಗಳೆಲ್ಲಾ ಬತ್ತಿ ಹೋಗಿವೆ, ಹೊಸ ಬೋರ್‌ವೆಲ್‌ಗಳನ್ನು ತೆಗೆಸುವುದಕ್ಕೆ ಅವಕಾಶವಿಲ್ಲವೆಂದು

ಹೇಳುತ್ತಾರೆ. ಜಿಲ್ಲಾಧಿಕಾರಿಗಳ ಹತ್ತಿರ ದುಡ್ಡು ಸಹ ಇಲ್ಲ, 2 ವರ್ಷಗಳಿಂದ ಬರಗಾಲ, ಮನುಷ್ಯರಿಗೂ ಕುಡಿಯುವುದಕ್ಕೆ ನೀರಿಲ್ಲ, ಜಾನುವಾರುಗಳಿಗೂ ಕುಡಿಯುವುದಕ್ಕೆ ನೀರಿಲ್ಲ, ಇಂಥ ಪರಿಸ್ಥಿತಿ ಇಡೀ ರಾಜ್ಯದಲ್ಲಿ ನಿರ್ಮಾಣವಾಗಿದೆ. ಯಾವ ಊರಿಗೆ ಹೋದರೂ ಸಹ, ಮೊನ್ನೆ ನಾನು ನನ್ನ ಮತ ಕ್ಷೇತ್ರಕ್ಕೆ ಹೋಗಿದ್ದಂಥ ಸಂದರ್ಭದಲ್ಲಿ, ನಮ್ಮ ಕ್ಷೇತ್ರದ ಯಾವ ಹಳ್ಳಿಗೆ ಹೋದರೂ ಕುಡಿಯುವ ನೀರಿನ ಸಮಸ್ಯೆಯಿದೆ ಎಂದು ಜನರು ಹೇಳುತ್ತಿದ್ದಾರೆ. ಹೊಸದಾಗಿ ಬೋರ್‌ವೆಲ್ ತೋಡಿಸಬೇಕೆಂದರೆ ಜಿಲ್ಲಾಧಿಕಾರಿಗಳ ಬಳಿಯೂ ದುಡ್ಡಿರುವುದಿಲ್ಲ ಮತ್ತು CEO ಬಳಿಯೂ ದುಡ್ಡಿರುವುದಿಲ್ಲ. ಹೊಸ ಬೋರ್‌ವೆಲ್ ಕೊರೆಸುವುದಕ್ಕೆ ಆಗುವುದಿಲ್ಲ. ಬೇಕಾದರೆ augmentation ಮಾಡಬಹುದು, ಇರುವಂಥ ಬೋರ್‌ವೆಲ್‌ಗಳಿಗೆ improvement ಮಾಡಬಹುದೆಂದು ಹೇಳುತ್ತಾರೆ. ನೀರೇ ಬತ್ತಿ ಹೋಗಿದೆ, ನೀರೇ ಇಲ್ಲ, ಇನ್ನು augmentation ಎಲ್ಲಿ ಮಾಡುವುದು? ಕೆಲವು ಕಡೆ ಬೋರ್‌ವೆಲ್ ತೋಡಿದರೂ ಸಹ ನೀರು ಬತ್ತಿ ಹೋಗುತ್ತದೆ. ನಾವು ಕೆಲವು ಕಡೆ ಬೋರ್‌ವೆಲ್ ತೋಡಿಸಿದೆವು. ಆದರೆ, ಮತ್ತೆ 1 ತಿಂಗಳು, 15 ದಿವಸಗಳಲ್ಲಿ ಪುನಃ ಬತ್ತಿ ಹೋಗುತ್ತವೆ. ಇವರು ಟ್ಯಾಂಕರ್‌ಗಳ ಮೂಲಕ ಹಳ್ಳಿಗಳಿಗೆ ಕೊಡುತ್ತಿದ್ದ ನೀರನ್ನು ನಿಲ್ಲಿಸಿದ್ದಾರೆ. ಈಗ ಇವರು ಕೊಟ್ಟಿರುವ ಅಂಕಿ-ಅಂಶಗಳ ಪ್ರಕಾರ ಕೇವಲ 199 ಹಳ್ಳಿಗಳಿಗೆ ಮಾತ್ರ ಟ್ಯಾಂಕರ್ ನೀರನ್ನು ಕೊಡುತ್ತಿದ್ದಾರೆ. ಅಂದು ಸುಮಾರು 700 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಕೊಡುತ್ತಿದ್ದೇವೆ ಎಂದು ಹೇಳಿದರು. ಈಗ ಯಾವ ಹಳ್ಳಿಗಳಿಗೆ ನೀರು ಕೊಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಯಾವ source ನಿಂದ ನೀರು ಬರುತ್ತಿದೆಯೋ ಗೊತ್ತಿಲ್ಲ, ಒಂದು ಕಡೆ ದುಡ್ಡೂ ಇಲ್ಲ, ಮತ್ತೊಂದು ಕಡೆ ಬೋರ್‌ವೆಲ್ ತೋಡಿಸುವುದಕ್ಕೆ ಅವಕಾಶವೂ ಇಲ್ಲ. ಈ ದುಡ್ಡನ್ನು Task Force ಗೆ ಬಿಡಗಡೆ ಮಾಡಿ ಎಂದರೆ ಅದನ್ನು ಮಾಡುವುದಿಲ್ಲ. ಮಾನ್ಯ ಅಧ್ಯಕ್ಷರೆ, ಗೋ ಶಾಲೆಗಳು, 200 ಚಿಲ್ಲರೆ ಗೋ ಶಾಲೆಗಳನ್ನು ಮಾಡಿದ್ದರು, ಆದರೆ ಇವತ್ತು ಎಷ್ಟು ಗೋ ಶಾಲೆಗಳಿವೆ ಎನ್ನುವ ಲೆಕ್ಕವನ್ನು ನೋಡಿದರೆ, ಕೇವಲ 5 ಮಾತ್ರ ಇದೆ.

ಮೈಸೂರು ಜಿಲ್ಲೆಯಲ್ಲಿ 2, ಮತ್ತೊಂದು ಜಿಲ್ಲೆಯಲ್ಲಿ 2, ಕೇವಲ 5 ಗೋ ಶಾಲೆಗಳಿವೆ. ಎಲ್ಲಾ ಗೋ ಶಾಲೆಗಳನ್ನು ಮುಚ್ಚಿದ್ದಾರೆ. ಸುಮಾರು 1 ಕೋಟಿ 40 ಲಕ್ಷ ಜಾನುವಾರುಗಳಿವೆ. ಕುರಿಗಳು, ಮೇಕೆಗಳು ಇವು ಸುಮಾರು 1 ಕೋಟಿ 60 ಲಕ್ಷ ಸಂಖ್ಯೆಯಲ್ಲಿವೆ, ಇವೆಲ್ಲವನ್ನೂ ಸೇರಿಸಿದರೆ ಸುಮಾರು 3 ಕೋಟಿ ಪ್ರಾಣಿಗಳಿಗೆ ನೀರು ಕೊಡಬೇಕು, ಮೇವು ಕೊಡಬೇಕು, ಇದು ಇಲ್ಲವೇ ಇಲ್ಲ. ಅನೇಕ ಜನ, ಮೊನ್ನೆ ಇವರ ಜಿಲ್ಲೆಗೆ ಪಾದಯಾತ್ರೆ ಮಾಡಿದ ಸಂದರ್ಭದಲ್ಲಿ ಹೋಗಿದ್ದಾಗ, ಬಹಳ ಜನ ಬಿಜಾಪುರ, ಬಾಗಲಕೋಟೆ, ಕೊಪ್ಪಳ, ರಾಯಚೂರು ಜಿಲ್ಲೆಗಳ ಜನ ನನ್ನನ್ನು ಮಾತನಾಡಿಸಿದರು. ನಾನು ಅವರನ್ನು ಕುರಿತು, ಏಕೆ ಬಂದಿದ್ದೀರಿ ಇಲ್ಲಿಗೆ ಎಂದು ಕೇಳಿದೆ. ಅದಕ್ಕೆ ಅವರು ನಾವುಗಳು ಜಮೀನುಗಳನ್ನು ಹೊಂದಿದ್ದು, 5 ಎಕರೆ, 6 ಎಕರೆ, 10 ಎಕರೆ ಇತ್ಯಾದಿ ಇದ್ದು, ಎಲ್ಲವೂ ಖುಷ್ಕಿ ಜಮೀನು, ಮಳೆ ಆಧಾರದ ಮೇಲೆ ಬೆಳೆ ಬೆಳೆಯುತ್ತಿದ್ದೆವು, ನೀರಿಲ್ಲದೆ ಬೆಳೆಗಳು ಒಣಗಿ ಹೋಗಿವೆ. ಆದ್ದರಿಂದ ನಾವು ಬಹಳ ಕಷ್ಟದಲ್ಲಿದ್ದೇವೆ. ಅದಕ್ಕೋಸ್ಕರವಾಗಿ ಈ ಕಡೆ ಕೂಲಿಗೋಸ್ಕರವಾಗಿ ಬಂದಿದ್ದೇವೆ. ದನ-ಕರುಗಳನ್ನು ಕೆಲವು ಕಸಾಯಿ ಖಾನೆಗೆ, ಮತ್ತು ಕೆಲವನ್ನು ಸಂತೆಗಳಲ್ಲಿ ಮಾರಾಟ ಮಾಡಿದ್ದೇವೆ, throwaway price ಗೆ ಮಾರಿದ್ದೇವೆ. ಈ ರೀತಿ ಜನರು ಕಷ್ಟದಲ್ಲಿದ್ದು ಗುಳೆ ಹೋಗುತ್ತಿದ್ದಾರೆ. ದನ-ಕರುಗಳು ಕಸಾಯಿ ಖಾನೆಗೆ ಹೋಗುತ್ತಿವೆ. ಕೆಲವು ಕಡೆ ಮಾರುತ್ತಿದ್ದಾರೆ. ಜನರು ಕರ್ನಾಟಕದಲ್ಲಿ ಕೇಳುವುದಕ್ಕೆ ನಿಮಗೆ ಆಶ್ಚರ್ಯವಾಗುತ್ತದೆ ಮಾನ್ಯ ಅಧ್ಯಕ್ಷರೆ, ಪ್ರತಿ ತಿಂಗಳು ಕೂಡ ಸುಮಾರು 25 ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಾಲದ ಬಾಧೆ ತಾಳಲಾರದೆ, ಬೆಳೆ ನಷ್ಟವಾಗಿ ಇನ್ನ್ಯಾವುದೋ ತೊಂದರೆಗಳಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ಸಂಖ್ಯೆ ತಿಂಗಳಿಗೆ ಕನಿಷ್ಟವೆಂದರೂ 25 ಆಗತ್ತಿದೆ. ಆದರೆ, ಸರ್ಕಾರಕ್ಕೆ ಮಾತ್ರ ಇದರ ಬಗ್ಗೆ ಗಮನವಿಲ್ಲ. ಇದರ ಬಗ್ಗೆ seriousness ಇಲ್ಲ. ಬೆಳಗಾವಿಯಲ್ಲಿ ಅಧಿವೇಶನ ನಡೆದು ಎಷ್ಟು ದಿನಗಳಾಗಿವೆ, ಅಧಿವೇಶನ ನಡೆದಾಗ ಅವತ್ತು ದುಡ್ಡು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಮೊನ್ನೆ ದಿವಸ ಅಂದರೆ 2013ನೇ ಜನವರಿ 30ನೇ ತಾರೀಖಿನಂದು

ಹಣ ಬಿಡುಗಡೆ ಮಾಡಿದ್ದಾರೆ. ಅದು ಸಹ ಇನ್ನೂ ಜಿಲ್ಲಾಧಿಕಾರಿಗಳಿಗೆ ತಲುಪಿಲ್ಲ. ಮೈಸೂರು ಜಿಲ್ಲಾಧಿಕಾರಿಗಳನ್ನು ಕೇಳಿದರೆ 9 ಲಕ್ಷ ರೂ. ಇದೆ ಎಂದು ಹೇಳುತ್ತಾರೆ. ಎರಡು ಗೋ ಶಾಲೆಗಳಿವೆ. ಇರುವ ದುಡ್ಡನ್ನು ಅಲ್ಲಿಗೆ ಕೊಟ್ಟು ಕೇವಲ 9 ಲಕ್ಷ ಇದೆ. ಕುಡಿಯುವ ನೀರಿಗೆ ಏನು ಮಾಡಬೇಕು? ಈ ತರಹದ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿದೆ. ಒಂದು ಕಡೆ ವಿದ್ಯುಚ್ಛಕ್ತಿ ಇಲ್ಲ. ವಿದ್ಯುತ್ ದಿನಕ್ಕೆ 2 ಗಂಟೆಗಳ ಕಾಲವೂ ಸಿಗುವುದಿಲ್ಲ. ವಿದ್ಯುಚ್ಛಕ್ತಿ ಕಂಪನಿಗಳಿಗೆ ದುಡ್ಡು ಕೊಡದೆ ಕಲ್ಲಿದ್ದಲು ಕೊಂಡುಕೊಳ್ಳಲು ಆಗುತ್ತಿಲ್ಲ. ಇಂತಹ ಕೆಟ್ಟ ಪರಿಸ್ಥಿತಿ ರಾಜ್ಯದಲ್ಲಿದೆ. ಇವರು ರಾಜಕಾರಣ, ಒಳ ಜಗಳ, ಕಚ್ಚಾಟ ಮಾಡಿಕೊಂಡು ಕುಡಿಯುವ ನೀರಿನ ಸಮಸ್ಯೆಯ ಕಡೆ ಗಮನ ಕೊಡುತ್ತಿಲ್ಲ. ಬರಗಾಲ ಎದುರಿಸುವ ಬಗ್ಗೆಯೂ ಕೂಡಾ ಇವರಿಗೆ ಗಮನ ಇಲ್ಲ. ಜಾನುವಾರುಗಳು ಪಾಪ, ಬೆಳಮಗಿಯವರು ಜಾನುವಾರುಗಳು ಎಲ್ಲಿಯಾದರೂ ಹೋಗಲಿ, ಏನಾದರೂ ಮಾಡಿಕೊಳ್ಳಲಿ, ಕಸಾಯಿ ಖಾನೆಗಾದರೂ ಹೋಗಲಿ, ಸಂತೆಗಾದರೂ ಹೋಗಲಿ ಎಂದು ಅವರ ಪಾಡಿಗೆ ಅವರು ಕುಳಿತು ಬಿಟ್ಟಿದ್ದಾರೆ. ಔಷಧಿ ಇಲ್ಲ, ಮೇವು ಇಲ್ಲ. ನಾನು ಕೇಳಿದ ಪ್ರಶ್ನೆಗೆ Revenue Department ನವರು ಇನ್ನು 20 ವಾರದವರೆಗೆ ಆಗುವಷ್ಟು ಮೇವು ಇದೆ ಎಂದು ಉತ್ತರ ಕೊಡುತ್ತಾರೆ, ಇನ್ನು 5 ತಿಂಗಳಿಗೆ ಆಗುವಷ್ಟು ಮೇವನ್ನು ಇವರು ಎಲ್ಲಿ ಇಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. 20 ವಾರದವರೆಗೆ ಆಗುವಷ್ಟು ಮೇವಿದೆಯಂತೆ, ಎಲ್ಲಿದೆ ಮೇವು? ಇವರು ಮೇವಿನ ಲೆಕ್ಕವನ್ನು ಹೇಗೆ ಹಾಕುತ್ತಾರೆಂದರೆ, ಇಷ್ಟು ಎಕರೆಗೆ ಬಿತ್ತನೆಯಾಗಿತ್ತು, ಇಷ್ಟು ಮೇವು ಬಂದಿರಬಹುದು ಎಂದು ಲೆಕ್ಕ ಹಾಕಿ ಇಷ್ಟು ಲಕ್ಷ ಟನ್ ಮೇವು ಇದೆ ಎಂದು ಹೇಳುತ್ತಾರೆ. It is only assumption. But, in reality, ಅಲ್ಲಿ ಮೇವಿಲ್ಲ. ಮೇವು ಬೆಳೆಯಲು ಇಷ್ಟು ಕಿತ್ತಿ ಕೊಟ್ಟೆವು. Farm ಗಳಲ್ಲಿ ಇಷ್ಟು ಎಕರೆ ಜಮೀನಿದೆ, ಇವೆಲ್ಲಾ ಕೇವಲ ಹೇಳಲು ಅಷ್ಟೆ. ಕುಡಿಯುವ ನೀರಿನದು ದೊಡ್ಡ ಸಮಸ್ಯೆ ಆಗಿದೆ. ಇದೊಂದು ಗಂಭೀರವಾದ ವಿಷಯ. ಈ ಕುರಿತು ಸುದೀರ್ಘವಾದ

ಚರ್ಚೆಯಾಗಬೇಕು. ಇಂದೇ ನಿಯಮ 60ರಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

**5. (ಅ) ಸಭಾಧ್ಯಕ್ಷರ ತೀರ್ಪು:**

**ವಿಷಯ: ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ನಿಯಮ 60 ರ ಬದಲು ನಿಯಮ 69 ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು.**

**ಅಧ್ಯಕ್ಷರು:–** ನಿಯಮ 69 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಟಿ.ಬಿ. ಜಯಚಂದ್ರ (ಸಿರಾ):–** ಇಂದೇ ಚರ್ಚೆ ಮಾಡಿದರೆ ಒಳ್ಳೆಯದು.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):–** ಮಧ್ಯಾಹ್ನದ ಮೇಲೆ ಚರ್ಚೆ ಮಾಡೋಣ.

**ಅಧ್ಯಕ್ಷರು:–** ಈಗ ವಂದನಾ ನಿರ್ಣಯ move ಮಾಡಲಿ.

**ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ):–** ಬರಗಾಲದ ಬಗ್ಗೆ ಪ್ರಾರಂಭ ಮಾಡೋಣ. ಬೇರೆ important ವಿಷಯ ಇದ್ದರೆ ಮಾಡಿ. ಇಲ್ಲದಿದ್ದರೆ ಬರಗಾಲದ ಬಗ್ಗೆ ಚರ್ಚೆಸೋಣ.

**ಶ್ರೀ ಸುರೇಶ್ ಕುಮಾರ್ (ಕಾನೂನು ಹಾಗೂ ನಗರಾಭಿವೃದ್ಧಿ ಸಚಿವರು):–** ಮಧ್ಯಾಹ್ನ ಚರ್ಚೆ ಮಾಡೋಣ.

**ಅಧ್ಯಕ್ಷರು:–** ಇದನ್ನು ನಿಯಮ 69 ರಡಿಯಲ್ಲಿ ಮಧ್ಯಾಹ್ನ ನಂತರ ಶ್ರೀ ಹೆಚ್.ಡಿ. ರೇವಣ್ಣ ಮತ್ತು ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಲಿ. ಈಗ ವೀರಣ್ಣ ಚರಂತಿಮಠ ಅವರು ಮಾತನಾಡಿ.